# CASE OF SEXUAL HARASSMENT AGAINST WOMEN

| Sl.No | Date | Type | File No | Subject |
|---|---|---|---|---|
| 1. | 06.01.2014 | Circular | ಸಿಆಸುಇ 20 ಸೇಇವಿ 2013 | ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ಬಗ್ಗೆ ಕರ್ನಾಟಕ ನಾಗರಿಕ ಸೇವಾ( ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ಕ್ಕೆ ಮಾಡಲಾದ ತಿದ್ದುಪಡಿಯನ್ನು ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳು ಹಾಗೂ ಇತರೆ ಸ್ವಾಯತ್ತ ಸಂಸ್ಥೆಗಳಾದ ಮಂಡಳಿಗಳು, ನಿಗಮಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳಿಗೆ ಅಳವಡಿಸುವ ಬಗ್ಗೆ. |

## ಕರ್ನಾಟಕಸರ್ಕಾರ

ಸಂಖ್ಯೆ: ಸಿಆಸುಇ 20 ಸೇಇವಿ 2013 ಕರ್ನಾಟಕ ಸರ್ಕಾರದ ಸಚಿವಾಲಯ

ವಿಧಾನಸೌಧ,

ಬೆಂಗಳೂರು, ದಿನಾಂಕ: 06.01.2014.

## ಸುತ್ತೋಲೆ

ವಿಷಯ: ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ಬಗ್ಗೆ ಕರ್ನಾಟಕ ನಾಗರಿಕ ಸೇವಾ( ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ಕ್ಕೆ ಮಾಡಲಾದ ತಿದ್ದುಪಡಿಯನ್ನು ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳು ಹಾಗೂ ಇತರೆ ಸ್ವಾಯತ್ತ ಸಂಸ್ಥೆಗಳಾದ ಮಂಡಳಿಗಳು, ನಿಗಮಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳಿಗೆ ಅಳವಡಿಸುವ ಬಗ್ಗೆ.

ಉಲ್ಲೇಖ; ದಿನಾಂಕ: 30-09-2000ರ ಸುತ್ತೋಲೆ ಸಂಖ್ಯೆ: ಸಿಆಸುಇ 12 ಸೇನಿಸಿ 2000.

*****

ಸರ್ವೋಚ್ಚ ನ್ಯಾಯಾಲಯವು ವಿಶಾಖ ಮತ್ತು ಇತರರು ವಿರುದ್ಧ ರಾಜಸ್ಥಾನ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದಲ್ಲಿ ದಿನಾಂಕ: 13-08-1997ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ಕ್ಕೆ ದಿನಾಂಕ: 17-06-1998ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 14 ಎಸ್ಆರ್‌ಸಿ 97ರಲ್ಲಿರುವಂತೆ ತಿದ್ದುಪಡಿ ಮಾಡಿ, ನಿಯಮ 29(ಬಿ)ಯನ್ನು ಸೇರಿಸಲಾಗಿದ್ದು, ಅದನ್ನು ಕೆಳಗೆ ಉದ್ಧರಿಸಲಾಗಿದೆ:-

**29B.Prohibition of sexual harassment:-**

No Government servant shall subject any woman Government servant to sexual harassment in working places.

Explanation:- For the purpose of this rule, "Sexual harassment include such unwelcome sexually determined (whether directly or by implication) behaviour as:-

a) Physical contact and advances;
b) A demand or request for sexual favours;
c) Sexually coloured remarks;
d) Showing pornography; or
e) Any other unwelcome physical, verbal or non-verbal conduct of sexual nature."

ಸರ್ಕಾರದ ಸಚಿವಾಲಯದ ಆಡಳಿತ ವ್ಯಾಪ್ತಿಗೆ ಬರುವ ಸಾರ್ವಜನಿಕ ಉದ್ದಿಮೆಗಳು ಹಾಗೂ ಇತರೆ ಸ್ವಾಯತ್ತ ಸಂಸ್ಥೆಗಳಾದ ಮಂಡಳಿಗಳು, ನಿಯಮಗಳು, ಅನುದಾನಿತ ಶಿಕ್ಷಣ ಸಂಸ್ಥೆ ಇತ್ಯಾದಿಗಳು ಮೇಲೆ ಉದ್ಧರಿಸಿದ ತಿದ್ದುಪಡಿಯನ್ನು ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳಲು ಉಲ್ಲೇಖದ ಸುತ್ತೋಲೆಯಲ್ಲಿ ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಸೂಚಿಸಲಾಗಿತ್ತು.

ಸರ್ವೋಚ್ಚ ನ್ಯಾಯಾಲಯವು ಮೇಧಾ ಕೊತ್ವಾಲ್ ಲೀಲೆ ವಿರುದ್ಧ ಕೇಂದ್ರ ಸರ್ಕಾರ ಪ್ರಕರಣದಲ್ಲಿ ದಿನಾಂಕ; 19-10-2012ರಂದು ನೀಡಿರುವ ತೀರ್ಪಿನಲ್ಲಿ ಈ ಕೆಳಕಂಡಂತೆ ಅವಲೋಕನೆ ಮಾಡಿರುತ್ತದೆ:-

> " The States and Union Territories which have not yet carried out adequate and appropriate amendments in their respective Civil Services Conduct Rules (By whatever name these Rules are called) shall do so within two months from today by providing that the report of the Complaints Committee shall be deemed to be an inquiry report in a disciplinary action under such Civil Services Conduct Rules. In other words, the disciplinary authority shall treat the report/findings etc., of the Complaints Committee as the findings in a disciplinary inquiry against the delinquent employee and shall act on such report accordingly. The findings and the report of the Complaints Committee shall not be treated as a mere preliminary investigation or inquiry leading to a disciplinary action but shall be treated as a finding/report in an inquiry into the misconduct of the delinquent"
>
> "…. The State functionaries and private and public sector undertaking/organizations/bodies/institutions etc. shall put in place sufficient mechanism to ensure full implementation of the vishaka guidelines and further provide that if the alleged harasser is found guilty, the complainant-victim is not forced to work with/under such harasser and where appropriate and possible the alleged harasser should be transferred. Further provision the alleged harasser should be transferred. Further provision should be made that harassment and intimidation of withnesses and the complainants shall be met with severe disciplinary action."

ಸರ್ವೋಚ್ಚ ನ್ಯಾಯಾಲಯವು ಮೇಲ್ಕಂಡ ಪ್ರಕರಣದಲ್ಲಿ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ಕ್ಕೆ ದಿನಾಂಕ: 02-12-2013ರ ಅಧಿಸೂಚನೆ ಸಂಖ್ಯೆ: ಸಿಆಸುಇ 20 ಸೇಇವಿ 2013ರಲ್ಲಿ ತಿದ್ದುಪಡಿ ಮಾಡಿ ನಿಯಮ "14ಬಿ" ಯನ್ನು ಸೇರಿಸಲಾಗಿದೆ. ಈ ಅಧಿಸೂಚನೆಯ ಸಂಬಂಧಿಸಿದ ಭಾಗವನ್ನು ಕೆಳಗೆ ಉದ್ಧರಿಸಿದೆ:-

1. **Insertion of new rule 14B:** In Karnataka Civil Services (Classification, Control and Appeal) Rules, 1957 after rule 14A, the following shall be inserted, namely:-

"**14B. Procedure in cases of sexual harassment against women:-** Notwithstanding anything contained in rule 11 to 13, the State level Committee and District level Committees constituted to inquire into the cases of sexual harassment against women in working places after having conducted an

enquiry on the Government servant shall submit a report along with details and documents, such report shall be considered by the competent disciplinary authority and keeping in view the nature and gravity of the proved misconduct, any one or more than one punishment specified under rule 8(i) to (viii) shall be imposed. An opportunity of being heard shall be given to the accused before imposing such penalty.

Provided that the commission shall be consulted before passing such order in any case for which such consultation is necessary.

ಸರ್ಕಾರದ ಸಚಿವಾಲಯದ ಆಡಳಿತ ವ್ಯಾಪ್ತಿಗೆ ಬರುವ ಸಾರ್ವಜನಿಕ ಉದ್ದಿಮೆಗಳು ಹಾಗೂ ಇತರೆ ಸ್ವಾಯತ್ತ ಸಂಸ್ಥೆಗಳಾದ ಮಂಡಳಿಗಳು, ನಿಗಮಗಳು, ಅನುದಾನಿತ ಶಿಕ್ಷಣ ಸಂಸ್ಥೆ ಇತ್ಯಾದಿಗಳು ಮೇಲೆ ಉದ್ಧರಿಸಿದ ತಿದ್ದುಪಡಿಯನ್ನು ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳಲು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಡಾ|| ಮಂಗಳ ಜಿ.ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)